ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 26–11–2020

# ಮಾಧ್ಯಮ ಆಮಂತ್ರಣ

1) ನ್ಯಾಯ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯದ ನೂತನ ಕಟ್ಟಡ ಉದ್ಘಾಟನೆ ಹಾಗೂ ಪೊಲೀಸ್ ಸಮುದಾಯ ಭವನದ ಶಂಕುಸ್ಥಾಪನೆ :

ದಿನಾಂಕ : 27–11–2020, ಶುಕ್ರವಾರ, ಸಮಯ : ಬೆಳಿಗ್ಗೆ 11–30 ಗಂಟೆಗೆ

ಸ್ಥಳ : ನ್ಯಾಯ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯ, ಮಡಿವಾಳ, ಬೆಂಗಳೂರು

2) ಬೆಂಗಳೂರು ಕೃಷಿ ವಿಶ್ವವಿದ್ಯಾಲಯ 54 ನೇ ಘಟಿಕೋತ್ಸವ ಕುರಿತು ಪತ್ರಿಕಾಗೋಷ್ಠಿ :

ಡಾ. ಎಸ್. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯದ

ಡಾ. ಜಿ. ಎಸ್. ಧನಪಾಲ್, ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ

ಡಾ: ಎಂ. ಬೈರೇಗೌಡ, ವಿಸ್ತರಣಾ ನಿರ್ದೇಶಕರು

ದಿನಾಂಕ : 27–11–2020, ಶುಕ್ರವಾರ, ಸಮಯ : ಅಪರಾಹ್ನ 12–00 ಗಂಟೆಗೆ

ಸ್ಥಳ : ಆಡಳಿತ ಮಂಡಳಿ ಸಭಾ ಕೊಠಡಿ, ನಾಯಕ್ ಭವನ, ಜಿ.ಕೆ.ವಿ.ಕೆ. ಬೆಂಗಳೂರು

# ಪತ್ರಿಕಾ ಪ್ರಕಟಣೆ

## ಭಾರತದ ಸಂವಿಧಾನ ಪ್ರಸ್ತಾವನೆ ಪ್ರತಿಜ್ಞಾವಿಧಿ ಬೋಧನೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ):

ಭಾರತದ ಸಂವಿಧಾನ ಪ್ರಸ್ತಾವನೆಯ ದಿನದ ಅಂಗವಾಗಿ ವಿಧಾನಸಭೆಯ ಉಪಸಭಾಧ್ಯಕ್ಷ ಆನಂದ ಮಹಾಮನಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಉಪಸಭಾಪತಿಗಳು ಮಾತನಾಡುತ್ತಾ ಈ ದಿನವು ಪವಿತ್ರವಾದ ಸಂವಿಧಾನವನ್ನು ಅಂಗೀಕರಿಸಿದ ದಿನ. ಭಾರತ ದೇಶದ ನಮ್ಮ ಸಂವಿಧಾನವು ಇಡೀ ಜಗತ್ತಿಗೆ ಮಾದರಿ ಸಂವಿಧಾನವಾಗಿದೆ. ಭಾರತ ದೇಶವು ಸಾರ್ವಭೌಮತ್ವವನ್ನು ಹೊಂದಿದ ದೇಶವಾಗಿದ್ದು, ಕಾನೂನು ವ್ಯವಸ್ಥೆ, ಗ್ರಾಮಪಂಚಾಯಿತಿ, ಆರೋಗ್ಯ, ರಕ್ಷಣೆ ಸಂವಿಧಾನ ತಳಹದಿಯ ಮೇಲೆ ನಡೆಯುತ್ತದೆ ಎಂದರು.

ಕರ್ನಾಟಕ ವಿಧಾನಸಭೆ ಸಚಿವಾಲಯದ ಜಂಟಿ ಕಾರ್ಯದರ್ಶಿ ಮಲ್ಲಪ್ಪ ಕಾಳೆ ಅವರು ಭಾರತದ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಜಂಟಿ ಕಾರ್ಯದರ್ಶಿ(ಪ್ರಭಾರ) ಕೆಂಪಮ್ಮ ಹಾಗೂ ವಿಧಾನಸಭೆಯ ಸಚಿವಾಲಯದ ಅಧಿಕಾರಿ, ಸಿಬ್ಬಂದಿ ಭಾಗವಹಿಸಿದ್ದರು.

ಛಾಯಾಚಿತ್ರ ಲಗತ್ತಿಸಿದೆ)

## ಭಾರತದ ಸಂವಿಧಾನ ಪ್ರಸ್ತಾವನೆ ಪ್ರತಿಜ್ಞಾವಿಧಿ ಭೋಧನೆ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ):

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಇಂದು ಭಾರತದ ಸಂವಿಧಾನ ದಿನದ ಅಂಗವಾಗಿ ಸಂವಿಧಾನದ ಪ್ರಸ್ತಾವನೆಯನ್ನು ಇಲಾಖೆಯ ಜಂಟಿ ನಿರ್ದೇಶಕ ಡಿ. ಪಿ. ಮುರಳೀಧರ್ ಅವರು ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಬೋಧಿಸಿದರು.

ಛಾಯಾಚಿತ್ರ ಲಗತ್ತಿಸಿದೆ)

## ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ):

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು ಯೋಜನಾ ವ್ಯಾಪ್ತಿಯಲ್ಲಿರುವ ಬೆಂಗಳೂರು ದಕ್ಷಿಣ ಮತ್ತು ಪೂರ್ವ ತಾಲ್ಲೂಕಿನಲ್ಲಿ ಹಾಲಿ ಖಾಲಿ ಇರುವಂತಹ 02 ಗೌರವ ಅಂಗನವಾಡಿ ಕಾರ್ಯಕರ್ತೆಯರು ಮತ್ತು 36 ಸಹಾಯಕಿಯರ ಹುದ್ದೆಗಳಿಗೆ ಅರ್ಹರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಕಛೇರಿಯಲ್ಲಿ ಸ್ವೀಕರಿಸುವುದಿಲ್ಲ. ಇಲಾಖಾ ಅಧಿಕೃತ ವೆಬ್‌ಸೈಟ್ www.anganwadirecruit.kar.nic.in ನಲ್ಲಿ ಆನ್ ಲೈನ್‌ಮೂಲಕ 21ನೇ ಡಿಸೆಂಬರ್ 2020 ರೊಳಗಾಗಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಕೃಷಿ ಇಲಾಖೆಯ ಬೆಳೆ ವಿಮಾ ಯೋಜನೆಯಡಿ ಬೆಳೆ ವಿಮಾ ಕಂತಿನ ಪಾವತಿ

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿಯಲ್ಲಿ 2020-21ರ ಹಿಂಗಾರು ಹಂಗಾಮಿನಲ್ಲಿ ರಾಜ್ಯದ 27 ಜಿಲ್ಲೆಗಳಲ್ಲಿ ಒಟ್ಟು 22 ಆಹಾರ, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಹಾಗೂ ಹಿಂಗಾರು ಹಂಗಾಮಿನಲ್ಲಿ 25 ಜಿಲ್ಲೆಗಳಲ್ಲಿ ಒಟ್ಟು 6 ಆಹಾರ, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಸೇರಿಸಲಾಗಿದ್ದು, ತಾಲ್ಲೂಕಿನ ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಸೇರಿಸಲಾಗಿದೆ.

ರೈತರು ಆಹಾರ ಮತ್ತು ಎಣ್ಣೆ ಕಾಳು ಬೆಳೆಗಳಿಗೆ ಶೇ.1.5ರಷ್ಟು ವಿಮಾಕಂತಿನ ಮೊತ್ತವನ್ನು ಆಹಾರ ಬೆಳೆಗಳಿಗೆ ಹಾಗೂ ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಶೇ. 5 ರಷ್ಟು ವಿಮಾ ಕಂತನ್ನು ಪಾವತಿಸಬೇಕು. ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬೆಳೆ ವಿಮೆಯಡಿ ಒಳಪಡುವುದು ಐಚ್ಛಿಕವಾಗಿರುತ್ತದೆ.

ಬೆಳೆ ಸಾಲ ಪಡೆಯದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳಲು ಹತ್ತಿರದ ಬ್ಯಾಂಕುಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲಾತಿಗಳಾದ ಪಹಣಿ, ಖಾತೆ ಪತ್ರ, ಕಂದಾಯ ರಸೀದಿ ನೀಡಬೇಕು. ಈಗಾಗಲೇ ಖಾತೆ

ಹೊಂದಿರುವ ಬ್ಯಾಂಕ್ ಶಾಖೆಯಲ್ಲಿ ವಿಮಾ ಕಂತನ್ನು ಕಟ್ಟಬೇಕು. ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಅರ್ಜಿ ನಮೂನೆಯಲ್ಲಿ ನಮೂದಿಸಬೇಕು.

ಬೆಳೆ ಸಾಲ ಪಡೆಯದ ರೈತರು ಅಂದಾಜು ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲಿ ಪಾಲ್ಗೊಳ್ಳಬಹುದು. ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಚೆ ಪಡದೇ ಇದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ.

ಬೆಳೆ ವಿಮೆಗೆ ನೋಂದಾಯಿಸುದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಯೋಜನೆಯಲ್ಲಿ ಭಾಗವಹಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕಿಂತ ಎರಡು ದಿವಸಗಳು ಮುಂಚಿತವಾಗಿ ನೊಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ಪತ್ರ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸಲು ಅವಕಾಶವಿರುತ್ತದೆ. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು ಅಥವಾ ಹೆಚ್ಚುವರಿ ವಿಮಾ ಕಂತನ್ನು ರೈತರಿಗೆ ಮರುಪಾವತಿಸಲಾಗುತ್ತದೆ.

**2020-21** ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಪ್ರಕೃತಿ ವಿಕೋಪ ಅಂದರೆ, ಆಲೀಕಲ್ಲು ಮಳೆ, ಭೂ ಕುಸಿತ ಮತ್ತು ಬೆಳೆ ಮುಳುಗಡೆ, ಮೇಘಸ್ಫೋಟ ಮತ್ತು ಗುಡುಗು ಮಿಂಚಿನಿಂದ ಉಂಟಾಗುವ ಬೆಂಕಿ ಅವಘಟಗಳಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ಪ್ರತ್ಯೇಕವಾಗಿ ಬೆಳೆ ನಷ್ಟ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ನೀಡಲಾಗುವುದು.

ಎಲ್ಲಾ ಜಿಲ್ಲೆಗಳಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಎರಡು ವಾರಗಳೊಳಗೆ ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ಪ್ರತ್ಯೇಕವಾಗಿ ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುತ್ತದೆ.

ಈ ಯೋಜನೆಯಡಿ ರೈತರು ಪಾಲ್ಗೊಳ್ಳಲು ಕೊನೆ ದಿನಾಂಕಗಳನ್ನು ಐದು ಹಂತಗಳಲ್ಲಿ ನಿಗಧಿಪಡಿಸಲಾಗಿದ್ದು, ಜಿಲ್ಲಾವಾರು ಬೆಳೆಯ ಕೊನೆಯ ದಿನಾಂಕದ ವಿವರಗಳನ್ನು ತಮ್ಮ ಜಿಲ್ಲೆಗಳಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಸಮೀಪದ ಹೋಬಳಿ ರೈತ ಸಂಪರ್ಕ ಕೇಂದ್ರ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿ ಅಥವಾ ಬ್ಯಾಂಕುಗಳನ್ನು ಸಂಪರ್ಕಿಸಬಹುದು.

ರೈತರು ಈ ಯೋಜನೆಯ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# KARNATAKA LEGISLATIVE ASSEMBLY

**SRI VISHWESHWAR HEGDE, KAGERI,**
**SPEAKER,**
**KARNATAKA LEGISLATIVE ASSEMBLY.**

## PARTICIPATION IN THE 80TH ALL INDIA PRESIDING OFFICERS' CONFERENCE- KEVADIYA, GUJARAT.

**(25 and 26 November 2020)**

"**Harmonious Coordination between Legislature, Executive and Judiciary - Key to a Vibrant Democracy**".

Hon'ble Chairman of the conference, respected Presiding Officers, Delegates and one and all present here.

First of all, I thank the Hon'ble Chairman for giving me an opportunity to participate in the discussion on "**Harmonious Coordination between Legislature, Executive and Judiciary - Key to a Vibrant Democracy**". As you are aware that our country is not only the largest working parliamentary democracy in the world, but also has the distinction of having lengthiest written Constitution. The salient

feature of the Constitution is that the sovereign power of the state is distributed among the three organs of the State namely, The **L**egislature, The **E**xecutive and the Judiciary. This is seen at the federal level and mirrored at the state level through a bicameral or unicameral legislature consisting of the people's direct or indirect representatives, an executive formed out of such representatives and answerable to the legislature and independent judiciary. The principle lying in the parliamentary democracy is that, powers of these three pillars of democracy must be balanced in a way that none should get credens over the other and each should act within the frame work under the Constitution. The Constitution empowers the parliament to make laws for the whole or part of the territory of India and similarly the State legislature**s and Legislatures of Union Territories** are empowered to make laws for whole or part of the State and Union Territories respectively.

The Executive power of the union is co-existence with the power of the parliament and the executive power of the state is co-existence with the power of the legislature within the provisions of the Constitution. The Executive has to act within the purview of laws enacted by the legislature / Parliament.

The Constitution confers power of judicial review of legislature or executive actions or judicial actions or the subordinate judiciary and to annul it, if it is found to be violating any of the Constitutional provisions.

The power of judicial review conferred on the Supreme Court is to interpret the provisions of the Constitution and laws and to strike down any law if it is found to be ultra-vires of the Constitution.

Though primarily courts have no power to legislate, however, in the absence of any law on a particular subject, the decisions of the Supreme Court on that subject operates as a law of the land and are binding on the entire nation. If the executive makes rules or the legislature makes laws, it can be challenged before the courts. But it is not the function of the judiciary to legislate. Therefore, the legislature is vested with the power to legislate, the executive is vested with the power to execute, and the judiciary is vested with the power to interpret and adjudicate the law.

If we analyse our Constitutional provisions, they indicate that none of the above three limbs of the state is supreme or superior to the other. Every limb of the state has to exercise its power and perform its functions within the frame work of the Constitution with utmost efficiency and harmonious coordination which is key to a vibrant

democracy. Here I would like to quote the words of Dr.B.R.Ambedkar, the Chairman of the drafting committee and the main architect of our Constitution, explaining the significance of the restrictive clauses incorporated in the provisions of the Constitution:-

> "The Constitution is a fundamental document. It is a document which defines the position and powers of the three organs of the State- the Executive, the Judiciary and the Legislature. It also defines the powers of the Executive and the powers of the Legislature against the citizens… In fact, the purpose of a Constitution is not merely to create the organs of the State but to limit their authority, because, if no limitation **is** imposed upon the authority of organs, there will be complete tyranny and complete oppression".

The power of the Legislature is also circumscribed by the limitations imposed by various articles of the Constitution as indicated by the words, "**Subject to the provisions of the Constitution**".

The power of judicial Review of executive and the legislative actions is one of the basic structures of the Constitution. Therefore, whenever Executive acts beyond its authority, or the Legislature acts

beyond its authority or competence or in violation of specific provisions of the Constitution, and the validity of the same is challenged before the Court by a citizen or any person, it becomes the duty of the Courts, particularly the Supreme Court and the High Courts to decide whether the action or law is constitutional.

In doing so, the Court will be discharging the duties imposed on them by the Constitution. It has to be considered that any interference by the judiciary, with legislative or executive action is not with any intention or desire to establish its supremacy over the other two wings, but to establish the supremacy of the Constitution.

In nutshell the discipline is essential for success of democracy. Mahatma Gandhiji had said:

> “ There is no human institution that has its dangers. The greater the institution, the greater the chances of abuse. Democracy is a great institution and, therefore, it is liable to be greatly abused. The remedy, therefore, is not avoidance of democracy, but reduction of possibility of abuse to a minimum”.

In order to achieve the dreams of Gandhiji and the framers of our Constitution, all the three organs of the State should function harmoniously within their respective jurisdiction and powers.

Here, I would like to bring to this forum that during the last decade there was judicial activism and there were examples of confrontation between the Legislature – Judiciary and Executive- Judiciary etc. However, now a days the three organs of the State are trying to establish harmonious relationship which is necessary for the vibrant democracy. In this regard, I would like to bring to the notice of the Hon'ble presiding officers that, in case of petitioners approaching the court of law under the Anti-defection law, when the same is pending within the jurisdiction of the presiding officers, the courts are not entertaining the petitions, and the petitioners are being directed to approach the legislature. Thereby the sanctity of the independence of legislature is respected. There are instances in our legislature where the individuals / organizations approaching the court of law with writ petitions and the courts use to issue notices to the presiding officers / secretaries of Legislature for appearing before the court. Here, I suggest that for maintaining the harmonious relationship, whenever the petitions are filed in the courts, before sending notice to the legislature, they have to seek the opinion of the legislature, if they are not satisfied

with the comments, then they may proceed with the petition, and suo-moto of issuing notice to the legislature should be avoided.

The executive should try hard to maintain and to implement the visions of Legislature and also to maintain its accountability to the Legislature with utmost care and diligence so as to achieve the welfare of the State and the Nation as the whole.

I would like to bring to the notice of the Hon'ble delegates that to achieve the above objectives every citizen of the Nation should be aware of the importance of the Constitution. In this regard, I suggested to the Hon'ble Chief Minister of Karnataka to implement the study of Constitution and also for observance of Constitution Day i.e., 26$^{th}$ day of November, every year in each and every school/ colleges including private organizations. I have also made an attempt by sharing an idea of holding a special discussion in our Legislative Assembly and I have received overwhelming support from the Hon'ble Chief Minister/ Hon'ble Chairman Legislative Council. Thus the discussion on Constitution was held in the Assembly/ Council for 8 days during March 2020. Hon'ble Members participated in the discussion with all the preparations. I hope such an attempt may also make our Legislators' fully aware of the provisions of the Constitution and it will be an attempt to achieve the objectives of the Constitution

With these words I conclude and I thank the Chairman of the conference for giving me this opportunity.

Thank you one and all,

Jai Hind, Jai Karnataka.

## 2019–20 ನೇ ಸಾಲಿನ ಫೆಲೋಶಿಫ್

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

**ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ 2019–20ನೇ ಸಾಲಿನ ಫೆಲೋಶಿಫ್‌ಗಾಗಿ ಡಿಂಪಲ್ ಬಿ. ಶಹ ಬೆಂಗಳೂರು, ಸುರೇಶ ಕೆ, ಮೈಸೂರು, ನಿಂಗನಗೌಡ ಸಿ. ಪಾಟೀಲ ವಿಜಯಪುರ, ಮಂಜುನಾಥ ವಿ ಕಲ್ಲೇದೇವರು ಬೆಂಗಳೂರು, ಜಗನ್ನಾಥ್ ಬೆಲ್ಲದ ಕಲಬುರಗಿ ಕಲಾವಿದರನ್ನು ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.**